ಒಳಗೆ ಹೋಗಿ ಚೈತ್ರ ಸಂಚಿಕೆಯನ್ನು ತಂದು ದಣಪೆಯ ಇನ್ನೊಂದು ಬದಿಗಿಟ್ಟೆ. ಓಡಿ ಬಂದು, ಕೈಗೆತ್ತಿಕೊಂಡು ಅವನು ತನ್ನ ಕೋಣೆಯ ಹೊಸ್ತಿಲ ಮೇಲೆ ಕುಳಿತು ಓದತೊಡಗಿದ.

"ವಿಶೂ ಅಂದರೆ ಹುಡುಗರ ಹೆಸರಲ್ಲೇನು?"

"ವಿಶಾಲಾಕ್ಷಿ. ಅದಕ್ಕ ವಿಶೂ ಅಂತಾರ. ಸದಾ ಅಂದ್ರೇನು? ಸದಾನಂದ?"

"ಸದಾಮ."

ನಾನು ಮುಂಜಾನೆ ಮಾಮಿ ತಯಾರಿಸಿದ್ದ ಅವಲಕ್ಕಿಯನ್ನು ನೆನಪಿಸಿಕೊಂಡು, "ಓಹ್, ಸುಧಾಮ ಏನ?"

"ಅಲ್ಲ, ಸದಾಂ."

ದಿನಕ್ಕೊಂದು ಕತೆ ಸಂಪುಟದ ಎಲ್ಲ ಪುಸ್ತಕಗಳನ್ನೂ ಸದಾ ಮುಂದಿನ ಎರಡೇ ದಿವಸದಲ್ಲಿ ಓದಿ ಮುಗಿಸಿಬಿಟ್ಟಿದ್ದ. ನಾನು ವಿರಾಮವಾಗಿ ಓದುವ ಪುಸ್ತಕಗಳನ್ನು ಇವನು ಅವಸರವಸರವಾಗಿ ಓದುವುದು ನನಗೆ ವಿಚಿತ್ರವೆನ್ನಿಸುತ್ತಿತ್ತು.

"ಅಷ್ಟು ಸ್ಪೀಡಾಗಿ ಹೆಂಗ ಓದಿದಿ? ಚಿತ್ರಾ ಅಷ್ಟ ನೋಡಿ ಓದೇನಿ ಅಂತ ಸುಳ್ಳಾ ಪಳ್ಳಾ ಹೇಳಬಾರ್ದು."

"ಪ್ರಶ್ನೆ ಕೇಳು ಬೇಕಾದ್ರೆ."

ನಾನು ಹುಡುಕಿ ಹುಡುಕಿ ಕೇಳಲು ಶುರುಮಾಡಿದೆ.

"ಮಾರಪ್ಪನ ಗುಡಿಸಲು ಕತಿಯಾಗ ಅವನ ಕೊನೀ ಮಗಳ ಹೆಸರೇನು?"

"ಸುಲೋಚನಾ."

"ವಿರಾಟನ ಅರಮನಿಯಾಗ ದ್ರೌಪದಿಯ ಹೆಸರೇನಾಗಿತ್ತು?"

"ಮಾಲಿನಿ."

"ರಾಮ ಶಬರೀನ ಎಲ್ಲೆ ಭೇಟಿಯಾಗ್ತಾನ?"

"ದಂಡಕಾರಣ್ಯದಲ್ಲಿ."

"ಅಕ್ಬರನ ಎದೀಗೆ ಒದ್ದವರನ್ನ ಏನು ಮಾಡಬೇಕಂತ ಬೀರಬಲ್ಲ ಹೇಳಿದ?"

"ಅವರಿಗೆ ಬೆಲ್ಲ ಕೊಡಬೇಕೆಂದು."

"ಯಾಕ?"

"ಒದ್ದವನು ಅಕ್ಬರನ ಮೊಮ್ಮಗನಾಗಿದ್ದ."

"ಓಹ್."

ಈ ಸರಳ ಪ್ರಶ್ನೋತ್ತರಗಳನ್ನು ಮೀರಿದ ಎಳೆಯೊಂದು ಮಾತುಗಳಲ್ಲಿ ಬಂದು ನಮ್ಮಿಬ್ಬರನ್ನೂ ಬೆರಗುಗೊಳಿಸುತ್ತಿತ್ತು. ನಾನು ಶುರುಮಾಡಿದ ವಾಕ್ಯವನ್ನು ಅವನು ಮುಗಿಸುವಷ್ಟು, ಅವನು ಹೇಳಲಿರುವ ವಿಚಾರ ನನಗೆ ಮೊದಲೇ ತಿಳಿಯುವಷ್ಟು ಕಾಕತಾಳಿಯವೋ ಎಂಬಂತೆ ಒದಗಿ ಬರುತ್ತಿತ್ತು.

"ಹೂವು ಕಿತ್ತಿದ್ರೆ..."

"...ಗಿಡಕ್ಕ ನೋವಾಗಂಗಿಲ್ಲೇನ?"

"ಮಲ್ಲಿಗೆ, ನಿತ್ಯಪುಷ್ಪ ಕೀಳಬಹುದು. ಯಾಕೆಂದರೆ, ಆ ಹೂವುಗಳು ಗಿಡಕ್ಕೆ ಅಂಟಿಕೊಂಡಂತೆ ಇರುತ್ತವೆ ಅಷ್ಟೇ."

"ಆದ್ರ ಗುಲಾಬಿ ಹಂಗಲ್ಲ. ಟೊಂಗೆ ಮುರೀದೇ ಅದನ್ನ ಕಿತ್ತಾಕಾಗಂಗಿಲ್ಲ."

"ಹಣ್ಣೂ ಅಷ್ಟೇ. ತಾನಾಗಿ ಮರದಿಂದ ಉದುರೋದು ಬೇರೆ..."

"...ನಾವೇ ಕಾಯಿ ಕಿತ್ತೋದು ಬ್ಯಾರೆ. ಕಾಯಿ ಕಿತ್ತಿದಲ್ಲೆ ಬಿಳಿ ಬಣ್ಣದ ಹಾಲು ಜಿನಗತೇತಲ್ಲ..."